4344 (3814) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (3814) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಪಡೆದು ಕೊಂಡವರು 10 ವರ್ಷಗಳ ಕಾಲ ಪರಭಾರೆ ಮಾಡದಂತೆ ಸರ್ಕಾರ ನಿರ್ಧಾರ ಕೈಗೊಂಡಿದೆಯೇ;

ಆ) ಹಾಗಿದ್ದಲ್ಲಿ, ಇದರಿಂದ ಆಗತಕ್ಕ ಪ್ರಯೋಜನಗಳೇನು;

ಇ) ಕೇವಲ ನಿವೇಶನ ರಹಿತರಿಗೆ ನಿವೇಶನ ಒದಗಿಸುವ ಉದ್ದೇಶದಿಂದ ಸರ್ಕಾರ 10 ವರ್ಷಗಳ ಕಾಲ ಪರಭಾರೆ ಮಾಡದಂತೆ ಎಲ್ಲಾ ನಗರ ಪಾಲಿಕೆಗಳು, ಪುರಸಭೆಗಳು ಹಾಗೂ ನಗರಸಭೆಗಳ ಮೂಲಕ ಹಂಚಿಕೆ ಮಾಡುವ ನಿವೇಶನಗಳಿಗೆ ನಿರ್ಬಂಧ ವಿಧಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ನಿವೇಶನ ರಹಿತರಿಗೆ ನಿವೇಶನ ಒದಗಿಸುವ ಹಾಗೂ ಅವರು ವಾಸ್ತವವಾಗಿ ಸದರಿ ನಿವೇಶನದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುವ ಉದ್ದೇಶದಿಂದ ಸರ್ಕಾರವು ಈ ನಿರ್ಧಾರವನ್ನು ತೆಗೆದುಕೊಂಡಿರುತ್ತದೆ. ಈ ರೀತಿ 10 ವರ್ಷಗಳ ಕಾಲ ಪರಭಾರೆ ಮಾಡದಂತೆ ನಿರ್ಬಂಧ ವಿಧಿಸುವುದರಿಂದ ಹಂಚಿಕೆದಾರರು ಲಾಭಕ್ಕಾಗಿ ನಿವೇಶನವನ್ನು ಮಾರಾಟ ಮಾಡುವುದು ಮತ್ತು ನಂತರ ಆಗಿಂದಾಗ್ಗೆ ಕ್ರಯ ವ್ಯವಹಾರ ಮಾಡುವುದನ್ನು ತಡೆಗಟ್ಟಿ ಹಂಚಿಕೆದಾರರು ಹಂಚಿಕೆ ಮಾಡಿರುವ ಉದ್ದೇಶಕ್ಕಾಗಿ ನಿವೇಶನವನ್ನು ಉಪಯೋಗಿಸುವಂತಾಗಲು ಸಹಕಾರಿಯಾಗುತ್ತದೆ.

ಇ) ಸ್ಥಳೀಯ ಸಂಸ್ಥೆಗಳಿಂದ ನಿವೇಶನ ಹಂಚಿಕೆ ಪ್ರಕರಣಗಳಲ್ಲಿ ಕೂಡ ಇಂತಹ ನಿರ್ಬಂಧವನ್ನು ವಿಧಿಸಲಾಗುವುದು.

4345 (3815) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ವಾಹನ ಸಂಚಾರ ವ್ಯವಸ್ಥೆಯ ಸುಧಾರಣೆಗಾಗಿ ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕಾರ್ಯಕ್ರಮಗಳು ಯಾವುವು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ನಗರದಲ್ಲಿನ ವಾಹನ ಸಂಚಾರ ವ್ಯವಸ್ಥೆಯನ್ನು ಉತ್ತಮ ಪಡಿಸುವ ಬಗ್ಗೆ ಕೈಗೊಳ್ಳಲಾದ ಕ್ರಮಗಳು.

1) 2005ನೇ ಸಾಲಿನ ಜೂನ್ ಮಾಹೆಯವರೆಗೆ ಪ್ರಮುಖ ರಸ್ತೆಗಳನ್ನು ಒಳಗೊಂಡಂತೆ ನಗರದ 81 ರಸ್ತೆಗಳಷ್ಟು ಏಕಮುಖ ಸಂಚಾರಗೊಳಿಸಲಾಗಿದೆ. ಇದರಿಂದಾಗಿ ಅತ್ಯಂತ ಸಂಚಾರ ದಟ್ಟಣೆ ಸಮಸ್ಯೆಗಳಿದ್ದಂತಹ ಹಲವಾರು ರಸ್ತೆಗಳಲ್ಲಿ ಸುಗಮ ಸಂಚಾರದ ವ್ಯವಸ್ಥೆಯಾಗಿದೆ.

2) 52 ಪ್ರಮುಖ ಜಂಕ್ಷನ್‌ಗಳಲ್ಲಿ ಸೋಲಾರ್ ಶಕ್ತಿ ಚಾಲಿತ ಸಿಗ್ನಲ್ ದೀಪಗಳನ್ನು ಅಳವಡಿಸಲಾಗಿದ್ದು, ಪುರಭವನ ಪ್ರದೇಶದಲ್ಲಿನ 8 ಜಂಕ್ಷನ್‌ಗಳಲ್ಲಿ ಏಕೀಕೃತ ಸ್ಪಂದನದ ವ್ಯವಸ್ಥೆ ಮಾಡಲಾಗಿದೆ.

3) ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ವಿರುದ್ಧ ಆಲ್ಕೋ ಮೀಟರ್ಸ್ ಬಳಕೆಯಿಂದ ತಪಾಸಣೆ ಮಾಡುವ ಕ್ರಮವನ್ನು ಜಾರಿಗೊಳಿಸಲಾಗಿದೆ. 2004ನೇ ಸಾಲಿನಲ್ಲಿ 20,000ಕ್ಕೂ ಮಿಗಿಲಾದ 2005ರಲ್ಲಿ ಇದುವರೆವಿಗೆ 15,000ಕ್ಕೂ ಮಿಗಿಲಾಗಿ ಮದ್ಯಪಾನ ಮಾಡಿ ವಾಹನ ಚಲಾಯಿಸಿದವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಅಭಿಯೋಗಗೊಳಿಸಲಾಗಿದೆ.

4) ಸ್ಪೀಡ್ ವಿಷನ್ ಕ್ಯಾಮೆರಾಗಳ ನೆರವಿನಿಂದ ಲೇಸರ್ ಮೂಲಕ ಮಿತಿಮೀರಿದ, ಅತಿ ವೇಗದಿಂದ ವಾಹನ ಚಲಾಯಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗಿದ್ದು, 5000ಕ್ಕೂ ಮಿಗಿಲಾಗಿ ಪ್ರಕರಣಗಳನ್ನು ದಾಖಲಿಸಲಾಗಿದೆ.

5) ಕಂಪ್ಯೂಟರ್ ಚಲನ್‌ಗಳ ಮೂಲಕ ಆಟೋಮೇಟೆಡ್ ಎನ್‌ಫೋರ್ಸ್‌ಮೆಂಟ್ (ಗಣಕೀಕೃತ ಸ್ವಯಂಚಾಲಿತ ಜಾರಿ ಕ್ರಮ) ಕ್ರಮವನ್ನು ಜಾರಿಗೊಳಿಸ ಲಾಗಿದೆ.

6) ರಸ್ತೆಗಳಲ್ಲಿ ಪರಿಣಾಮಕಾರಿ ಜಾರಿಕ್ರಮ ಕೈಗೊಳ್ಳುವ ಸಲುವಾಗಿ ಸಿಂಪ್ಯೂಟರಸ್‌ಗಳನ್ನು ಪರಿಚಯಿಸಲಾಗಿದೆ.

7) ಅಪಘಾತ ತನಿಖೆಯಲ್ಲಿ ಗುಣಮಟ್ಟ ಅಭಿವೃದ್ಧಿಪಡಿಸುವ ಸಲುವಾಗಿ, ಸಂಚಾರ ವಲಯ ಮತ್ತು ಉಪವಲಯಗಳನ್ನು ಸಂಚಾರ ಪೊಲೀಸ್ ಠಾಣೆಗಳಾಗಿ ಪರಿವರ್ತಿಸಲಾಗಿದೆ.

8) 2004ರಲ್ಲಿ ಸಂಚಾರ ಸಮಸ್ಯೆಗಳಿಗೆ ಅತಿ ಶೀಘ್ರವಾಗಿ ಕ್ಷಣ ಮಾತ್ರದಲ್ಲಿ ಸ್ಪಂದಿಸುವ ಸಂಚಾರಿ ಕೋಬ್ರಾಗಳನ್ನು (ಸುಸಜ್ಜಿತ ಮೋಟಾರ್ ಸೈಕಲ್‌ನಲ್ಲಿ ಸತತ ಗಸ್ತು ತಿರುಗಿ ತಕ್ಷಣ ಸ್ಪಂದಿಸುವ ನಿರಿತ ಮೋಟಾರ್ ಸೈಕಲ್ ಸವಾರರು) ಪರಿಚಯಿಸಲಾಗಿದ್ದು, ಈಗ ಸದ್ಯಕ್ಕೆ 39 ಕೋಬ್ರಾಗಳು ನಗರದಲ್ಲಿ ಸಂಚಾರಿ ಕಾರ್ಯನಿರತವಾಗಿವೆ.

ಬೆಂಗಳೂರು ನಗರದಲ್ಲಿನ ಸಂಚಾರ ವ್ಯವಸ್ಥೆಯನ್ನು ಉತ್ತಮ ಪಡಿಸುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳು.

1) ಪ್ರಮುಖ ರಸ್ತೆಗಳನ್ನು ಒಳಗೊಂಡಂತೆ ನಗರದ ಅತ್ಯಂತ ಸಂಚಾರ ದಟ್ಟಣೆ ಸಮಸ್ಯೆಗಳಿದ್ದಂತಹ ಇನ್ನೂ ಹೆಚ್ಚಿನ ರಸ್ತೆಗಳನ್ನು ಏಕಮುಖ ಸಂಚಾರಗೊಳಿಸಿ ಇದರಿಂದಾಗಿ ರಸ್ತೆಗಳಲ್ಲಿ ಸುಗಮ ಸಂಚಾರದ ವ್ಯವಸ್ಥೆಯಾಗುವಂತೆ ಮಾಡಬೇಕಾಗಿದೆ.

2) 2004ರಲ್ಲಿ ಸಂಚಾರ ಸಮಸ್ಯೆಗಳಿಗೆ ಅತಿ ಶೀಘ್ರವಾಗಿ ಕ್ಷಣ ಮಾತ್ರದಲ್ಲಿ ಸ್ಪಂದಿಸುವ ಸಂಚಾರಿ ಕೋಬ್ರಾಗಳನ್ನು (ಸುಸಜ್ಜಿತ ಮೋಟಾರು ಸೈಕಲ್ ಸವಾರರು) ಪರಿಚಯಿಸಲಾಗಿದ್ದು, ಈಗ ಸದ್ಯಕ್ಕೆ 39 ಕೋಬ್ರಾಗಳು ನಗರದಲ್ಲಿ ಸಂಚಾರಿ ಕಾರ್ಯನಿರತವಾಗಿವೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕೋಬ್ರಾ ಪಡೆಯನ್ನು ಕಾರ್ಯನಿರತಗೊಳಿಸಬೇಕಾಗಿರುತ್ತದೆ.

3) ಸುಗಮ ಸಂಚಾರದ ಹಿತ ದೃಷ್ಟಿಯಿಂದ ಫ್ಲೈ ಓವರ್‌ಗಳ ನಿರ್ಮಾಣ ವಾಗಿದ್ದು, ಕೆಲವೊಂದು ಫ್ಲೈ ಓವರ್‌ಗಳ ನಿರ್ಮಾಣ ಮಾಡಬೇಕಾಗಿರುತ್ತದೆ.

4) ಸುಗಮ ಸಂಚಾರದ ಹಿತದೃಷ್ಟಿಯಿಂದ ಭಾರೀ ವಾಹನಗಳ ಓಡಾಟಕ್ಕೆ ಹೊರ ವರ್ತುಲು ರಸ್ತೆ (ಪೆರಿಪೆರಿಯಲ್ ರಸ್ತೆ) ನಿರ್ಮಾಣ ಕಾರ್ಯ ಮಾಡಬೇಕಾ ಗಿರುತ್ತದೆ. ಇದರಿಂದ ನಗರದ ಮಧ್ಯಭಾಗದಲ್ಲಿ ಸಂಚಾರ ದಟ್ಟಣೆ ಕಡಿಮೆ ಯಾಗುತ್ತದೆ.

5) ವಾಹನಗಳ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ನಗರದಲ್ಲಿ ಸಮೂಹ ಸಂಚಾರ ಮೆಟ್ರೋ ರೈಲು ಮುಂತಾದ ವ್ಯವಸ್ಥೆಗಳ ಕಾರ್ಯ ಆಗಬೇಕಾಗಿರುತ್ತದೆ.

4346 (3816) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) :– ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಶಿವಾಜಿನಗರ, ಭಾರತೀನಗರ ಹಾಗೂ ಜಯಮಹಲ್ ವಿಧಾನ ಸಭಾ ಕ್ಷೇತ್ರಗಳಲ್ಲಿ ಹಾದು ಹೋಗುವ ದೊಡ್ಡ ನಾಲಾದ ದುರಸ್ತಿ, ಶುದ್ಧೀಕರಣ ಹಾಗೂ ಅವುಗಳ ಮೇಲೆ ಕಾಂಕ್ರೀಟ್ ಹಾಕುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೇ;

ಆ) ಈ ದೊಡ್ಡ ನಾಲಾದ ಉದ್ದವೆಷ್ಟು ಹಾಗೂ ಇಲ್ಲಿಯವರೆಗೆ ಈ ದೊಡ್ಡ ನಾಲಾ ದುರಸ್ತಿ ಹಾಗೂ ಕೈಗೊಂಡ ಇತರ ಕಾಮಗಾರಿಗಳ ವಿವರ ನೀಡುವುದು;

ಇ) ಈ ದೊಡ್ಡ ನಾಲಾದಿಂದ ಪರಿಸರ ಹಾಳಾಗಿ, ಅಕ್ಕಪಕ್ಕದ ನಿವಾಸಿಗಳಿಗೆ ಹಲವಾರು ಕಾಯಿಲೆಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) 2005–06ರಲ್ಲಿ ಈ ದೊಡ್ಡ ನಾಲಾ ದುರಸ್ತಿ ಹಾಗೂ ಅಭಿವೃದ್ಧಿಗಾಗಿ ಖರ್ಚು ಮಾಡುವ ಹಣವೆಷ್ಟು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು) :

ಅ) ಹೌದು. ಆದರೆ, ಮೋರಿಯ ಮೇಲೆ ಕಾಂಕ್ರೀಟ್ ಛಾವಣಿಯನ್ನು ಹಾಕುವ ಪ್ರಸ್ತಾವನೆ ಇರುವುದಿಲ್ಲ. (ಹಲಸೂರು ಕೆರೆಯ ಪಕ್ಕ ಸುಮಾರು 300 ಮೀ.ಉದ್ದವನ್ನು ಬಿಟ್ಟು)

ಆ) ಈ ವಿಧಾನ ಸಭಾ ಕ್ಷೇತ್ರದಲ್ಲಿ ಚಲ್ಲಘಟ್ಟ ಕಣಿವೆ ಹಾಗೂ ಹೆಬ್ಬಾಳ ಕಣಿವೆಯ ನಾಲೆಗಳು ಹಾದು ಹೋಗುತ್ತಿವೆ.

1) **ಚಲ್ಲಘಟ್ಟ ನಾಲೆ :–**

ಮುಖ್ಯ ವಾಹಿನಿ (ವಸಂತನಗರದಿಂದ ಪ್ರಾರಂಭವಾಗಿ ಬೆಳ್ಳಂದೂರು ಕೆರೆಗೆ ಸೇರುವುದು) ಇದರ ಉದ್ದ 12.00 ಕಿ.ಮೀ.

ಸೆಕೆಂಡರಿ ನಾಲೆ ಉದ್ದ 6.50 ಕಿ.ಮೀ.